

ಫಾರೆಸ್ಟ್ ಗಾರ್ಡ್ ಜೊತೆ ಲೇಖಕ





ಮತ್ತು ಇತರ ಅತ್ಯಂತ ಅಪರೂಪದ ಪ್ರಾಣಿಗಳಾದ ಕ್ಲೌಡೆಡ್ ಲೆಪರ್ಡ್, ಆನೆ ಮತ್ತು ಒಂಬತ್ತು ಜಾತಿಯ ವಾನರಗಳು ಕಂಡುಬರುವ ಹೊಲ್ಲಾಂಗ್ ಪಾರ್ ವನ್ಯಧಾಮವನ್ನು ಸೀಳುವಂತಹ ರೈಲ್ವೇ ಹಳಿಯನ್ನು ನೋಡಿ ಬೆರಗಾದೆವು. ವನ್ಯಧಾಮ ಪ್ರವೇಶಿಸಿ ಗಾರ್ಡ್ ಮತ್ತು ಗೈಡ್ ಇಬ್ಬರನ್ನೂ ಕರೆದುಕೊಂಡು ಕಾಡು ಸುತ್ತಲು ಹೊರಟೆವು.

ಈ ವನ್ಯಧಾಮಕ್ಕೆ ಹೆಸರು ಬಂದಿರುವುದು ಇಲ್ಲಿ ಯಥೇಚ್ಛವಾಗಿ ಕಂಡುಬರುವ ಹೊಲ್ಲಾಂಗ್ ಮರಗಳಿಂದಾಗಿ. ಹೊಲ್ಲಾಂಗ್ ಮರವು ಅಸ್ಸಾಂ ಮತ್ತು ಅರುಣಾಚಲ ಪ್ರದೇಶದ ರಾಜ್ಯ ಮರಗಳೆಂದು ಗುರುತಿಸಲ್ಪಟ್ಟಿವೆ. ಈ ಮರಗಳಲ್ಲೇ ಗಿಬ್ಬನ್ ಸಂಸಾರಗಳ ವಾಸ.

ವನ್ಯಧಾಮದ ಒಳಗೆ ನಡೆಯಲು ಶುರು ಮಾಡಿದ ನೂರು ಮೀಟರ್ ಒಳಗೇ ಒಂದು ಗಿಬ್ಬನ್ ಕುಟುಂಬ ಕಂಡಿತು. ಎಂದೂ ನೋಡಿರದ ಗಿಬ್ಬನ್ನುಗಳನ್ನು ನೋಡಿ ರೋಮಾಂಚನಗೊಂಡೆವು. ನಮ್ಮನ್ನು ನೋಡಿ ಗಾಬರಿಗೊಂಡ ಎಲ್ಲಾ ಗಿಬ್ಬನ್ನುಗಳೂ ಕಾಡಿನ ಒಳಕ್ಕೆ ಜೀಕುತ್ತಾ ಹೊರಟುಹೋದವು. ನಮ್ಮ ಜೊತೆ ಬಂದಿದ್ದ ಗೈಡ್ ಮತ್ತು ಗಾರ್ಡ್‌ಗಳೊಂದಿಗೆ ಕಾಡಿನ ವೈಶಿಷ್ಟ್ಯಗಳ ಬಗ್ಗೆ ಹರಟುತ್ತಾ ನಡೆಯುತ್ತಿರಬೇಕಾದರೆ, ದೂರದಲ್ಲೆಲ್ಲೋ ಗಿಬ್ಬನ್ನುಗಳ ಕೂಗಾಟ ಶುರುವಾಯಿತು. ಕೂಗಾಟದ ದಿಕ್ಕಿಗೇ ಮುಖ ಮಾಡಿ ಸದ್ದು ಮಾಡದೆ ಹೆಜ್ಜೆ ಹಾಕತೊಡಗಿದೆವು.

ಗಿಬ್ಬನ್ನುಗಳು ಬೆಳಿಗ್ಗೆ ಸುಮಾರು ಹತ್ತು ಗಂಟೆಯವರೆಗೂ ಬಲು ಚಟುವಟಿಕೆಯಿಂದ ಇರುತ್ತವೆ. ಆ ಸಮಯದಲ್ಲಿ ಇವುಗಳ ಕೂಗಾಟ ಹಾರಾಟ ಮುಗಿಲು ಮುಟ್ಟುತ್ತದೆ. ಕಾಡಿನಲ್ಲಾದರೆ ಸುಮಾರು ನಾಲ್ಕು ಕಿಲೋ ಮೀಟರ್ ದೂರದವರೆಗೂ ಗಿಬ್ಬನ್ ಕೂಗು ಕೇಳುತ್ತದೆಯಂತೆ.

## ಮರದ ಮೇಲೆ ಜೀವನ

ಜೀವನದಲ್ಲಿ ಎಂದಿಗೂ ನೆಲಕ್ಕೆ ಇಳಿಯದ ಈ ಗಿಬ್ಬನ್ನುಗಳ ಜನನ, ಬೆಳವಣಿಗೆ, ಸಂಗಾತಿಯ ಹುಡುಕಾಟ, ಸಂಸಾರ, ಮುಪ್ಪು, ಸಾವು ಎಲ್ಲವೂ ಮರದ ಮೇಲೆಯೇ. ಎಲೆಗಳಲ್ಲಿ ಸಂಗ್ರಹವಾದ ಮಳೆ ಮತ್ತು ಇಬ್ಬನಿಯ ನೀರು ಕುಡಿದು ಬದುಕುತ್ತವೆ ಎಂದಾಗ ಜೀವ ವಿಕಸನದ ಸಂಕೀರ್ಣತೆಯ ಬಗ್ಗೆ ಅಚ್ಚರಿ ಮೂಡುವುದು ಸಹಜವೇ. ಧರೆಯ ಪ್ರತಿಯೊಂದು ಪ್ರಾಣಿಯೂ ಅದರ ಆವಾಸ ಸ್ಥಾನಕ್ಕೆ ಹೊಂದಿಕೊಂಡಿರುವ ರೀತಿ ಮನುಷ್ಯನ ಊಹೆಗೂ ನಿಲುಕದ್ದು.